ಮಾಡಿದ ಅವರು ಒಂದನ್ನು ತದೇಕಚಿತ್ತರಾಗಿ ನೋಡ ಹತ್ತಿದ್ದರು. ತುಸು ಸಮಯ ಕಳೆದರೂ ಮಾತನಾಡದ ಅವರನ್ನು ಕಂಡು ಎದುರಿಗೆ ಕುಳಿತ ನನಗೇ ಛಳಕು ಹೊಡೆದಂತಾಗಿತ್ತು. ಏನು ಕಾದಿದೆಯೋ... ಬೆನ್ನು ಕೋಲಿನ ಎಷ್ಟನೇ ಮಣಿ ಮುರಿದಿದೆಯೋ ಎನ್ನುವ ಆತಂಕ. ಅಷ್ಟರಲ್ಲಿ ಪರಿಶೀಲಿಸುವ ಕಾರ್ಯವನ್ನು ಮುಗಿಸಿದ ಅವರು ಅದನ್ನು ನನ್ನೆದುರಿಗೆ ಹಿಡಿಯುತ್ತಾ ನೋಡಿ ಇದು ನಿಮ್ಮ ಬೆನ್ನು ಕೋಲು... ಇದು 33 ಮಣಿಗಳನ್ನು ಹೊಂದಿರುತ್ತದೆ. ಇದು ನಿಮ್ಮನ್ನು ನೆಟ್ಟಗೆ ನಿಲ್ಲಲು ಸಹಾಯ ಮಾಡುವುದೇ ಅಲ್ಲದೇ ನಿಮ್ಮ ಬೆನ್ನುಹುರಿಯನ್ನು ರಕ್ಷಿಸುವ ಕೆಲಸವನ್ನೂ ಮಾಡುತ್ತದೆ. ಪ್ರಾಣಿಗಳಲ್ಲಿಯಾದರೆ ಅದೇ ಮುಂದುವರಿದು ಬಾಲವಾಗುವುದು. ಮನುಷ್ಯರಲ್ಲಿ ಇಲ್ಲಿಗೇ ನಿಲ್ಲಬೇಕು. ಆದರೆ ನಿಮ್ಮಲ್ಲಿ ಇದು ತುಸು ಬಲಗಡೆಗೆ ಬಾಗಿದೆ. ಬೇಕಾದರೆ ಹಿಂದೆ ಕೈ ಹಾಕಿ ನೋಡಿಕೊಳ್ಳಿ ನಿಮಗೇ ತಿಳಿಯುತ್ತದೆ. ಅದು ಬಾಗಿದ್ದರಿಂದ ಪರವಾಯಿಲ್ಲ... ಇಲ್ಲದಿದ್ದರೆ...' ಮುಂದೆ ಅವರು ಹೇಳುವುದನ್ನು ಕೇಳುವ ಧೈರ್ಯ ನನ್ನಲ್ಲಿರಲಿಲ್ಲ.

'ಅದಕ್ಕೆ ಪರಿಹಾರ...' ತೊದಲುತ್ತ ಕೇಳಿದ್ದೆ.

'ನೀವೇನೂ ಚಿಂತೆ ಮಾಡಬೇಡಿ ಅದಕ್ಕೆಲ್ಲ ಚಿಕಿತ್ಸೆಯಿದೆ' ಎನ್ನುತ್ತಿದ್ದಂತೆಯೇ ಅವರ ಫಿಸಿಯೋ ಥೆರೆಪಿಸ್ಟ್ ಒಳಬಂದಿದ್ದ. 'ನೋಡಿ ಇವರು ಅದನ್ನೆಲ್ಲ ಸರಿ ಮಾಡುತ್ತಾರೆ' ಎನ್ನುತ್ತ 'ಆಯಾ ದಿನದ ಬಿಲ್ಲನ್ನು ಅದೇ ದಿನವೇ ಪೇ ಮಾಡಿಬಿಡಿ' ಎಂದು ಎಚ್ಚರಿಸಿ ನನ್ನನ್ನು ಅವರ ಆ ಸಹಾಯಕನಿಗೆ ಒಪ್ಪಿಸಿದ್ದರು. ಎಂಟು ದಿನಗಳ ಕಾಲ ಬೆನ್ನು ಮೂಳೆಯ ಹತ್ತಿರಕ್ಕೂ ಹೋಗದ ಆ ಫಿಸಿಯೋಥೆರೆಪಿಸ್ಟ್ ಬೆನ್ನಿನ ಆ ಬದಿ ಈ ಬದಿಗಳಿಗೆ ಮುಲಾಮು ಹಚ್ಚುತ್ತ ಆಗಾಗ್ಗೆ ಕರೆಂಟನ್ನೂ ಕೊಡುತ್ತ ದಿನಕ್ಕೆ ಐದು ಸಾವಿರದಂತೆ ಹಣ ವಸೂಲಿ ಮಾಡಿದ್ದ. ಅವನು ಸಾಕು ಎನ್ನುವ ಸೂಚನೆಯನ್ನೇ ತೋರಿಸದಿದ್ದರಿಂದ ನಾನಾಗಿಯೇ ಈ ರಗಳೆ ಸಾಕು ಎಂದು ಹೋಗುವುದನ್ನು ನಿಲ್ಲಿಸಿದ್ದೆ. ಕ್ರಮೇಣ ನೋವೂ ತನ್ನಷ್ಟಕ್ಕೇ ಮಾಯವಾಗಿತ್ತು. ಹತ್ತಿರ ಹತ್ತಿರ ಐವತ್ತು ಸಾವಿರದಷ್ಟು ಕೈ ಬಿಟ್ಟ ನೋವು ಮಾತ್ರ ಬಹಳ ದಿನಗಳವರೆಗೆ ನನ್ನನ್ನು ಕಾಡುತ್ತಲೇ ಇತ್ತು.

ಇತ್ತೀಚೆಗೆ ಗೂಗಲ್‌ನಲ್ಲಿ ನೋಡುತ್ತಿದ್ದಾಗ ಎಲ್ಲೋ ಕಾಣಿಸಿದ ನೂರಕ್ಕೆ 80 ಜನರಿಗೆ ಬೆನ್ನು ಮೂಳೆಯ ತುದಿ ತುಸು ಬಾಗಿರುತ್ತದೆ. ಅದೊಂದು ಭೌತಿಕ ಸ್ಥಿತಿಯೇ ಹೊರತು ದೇಹದ ಮೇಲೆ ಮತ್ತು ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರುವಂತಹುದಲ್ಲ ಎಂಬುದನ್ನು ಓದಿದ ನನಗೆ ಐವತ್ತು ಸಾವಿರ ಕಳೆದುಕೊಂಡ ನೋವು ಮರುಕಳಿಸಿತ್ತು.

★★★

ಇತ್ತೀಚೆಗೆ ತನ್ನ ಪಿತ್ತಕೋಶ ಸರಿಯಾಗಿ ಕೆಲಸ ಮಾಡುತ್ತಲಿಲ್ಲ ಎನ್ನುವ ಸಂಶಯ ಬಂದ ನನ್ನ ಮಗನನ್ನು ಕಾರ್ಪೋರೇಟ್ ಆಸ್ಪತ್ರೆಯೊಂದಕ್ಕೆ ಕರೆದೊಯ್ದಿದ್ದೆ. ಮಾಮೂಲಿ ನೋಂದಾವಣೆ ಅದಕ್ಕೆ ಸಲ್ಲ ಬೇಕಾಗಿದ್ದ ಛಾರ್ಜು ಎಲ್ಲವನ್ನೂ ಪಾವತಿ ಮಾಡಿದ ಮೇಲೆ ಒಬ್ಬ ಹೊಟ್ಟೆ ತಜ್ಞರ ಬಳಿಗೆ ಕಳುಹಿಸಿದ್ದರು. ಬಾಗಿಲಲ್ಲಿ ಅರ್ಧಗಂಟೆ ಕಾದು ನಮ್ಮ ಸರದಿ ಬಂದಾಗ ಒಳ ಹೋದ ನನ್ನ ಮಗನನ್ನು ಮುಟ್ಟಿಯೂ ನೋಡದ ಅವರು ಅವನಿಗೆ ಹತ್ತಾರು ಪ್ರಶ್ನೆಗಳನ್ನು ಕೇಳುತ್ತ ಏನೇನೋ ಬರೆದು ಕೊಳ್ಳುತ್ತಿದ್ದವರನ್ನು ನಾನು ಮಧ್ಯದಲ್ಲಿ ಏನೋ ಕೇಳ ಹೊರಟರೆ 'ಈಗಲೇ ಈ ಪೇಷಂಟಿನ ಬಗ್ಗೆ ಹದಿನೈದು ನಿಮಿಷ ಕಳೆದದ್ದಾಯ್ತು. ಈಗ ಈ ಟೆಸ್ಟುಗಳನ್ನೆಲ್ಲ ಮಾಡಿಸಿ' ಎನ್ನುತ್ತ ನಮ್ಮನ್ನು ಮಾತಿನಲ್ಲಿಯೇ ಹೊರದಬ್ಬಿದ್ದರು. ನನಗೆ ಬಾಲ್ಯದ ನಮ್ಮ ಹಳ್ಳಿಯ ಡಾಕ್ಟರು ನೆನಪಾಗಿದ್ದರು. ಈಚೆ ಬಂದು ನೋಡಿದರೆ ನನ್ನ ಮಗ ಅವರ ಪ್ರಶ್ನೆಗೆ ಕೊಟ್ಟ ಪ್ರತಿ ಉತ್ತರಕ್ಕೂ ಒಂದೊಂದು ಟೆಸ್ಟ್! ಹಾಳಾಗಿ ಹೋಗಲಿ ಎಂದು ಆ ಟೆಸ್ಟ್‌ಗಳನ್ನೆಲ್ಲ ಮಾಡಿಸಿ ರಿಸಲ್ಟ್